# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 06.06.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕೇಬಲ್ ಅಳವಡಿಸುವಾಗ ಅನುಮತಿ ಪಡೆದು, ಅಳತೆಗಿಂತ ಹೆಚ್ಚಿನ ಪ್ರಮಾಣದ ರಸ್ತೆ ಅಗೆದು ಅನಧಿಕೃತವಾಗಿ ಹಾಕಲಾದ ಕೇಬಲ್‌ಗಳನ್ನು ನಿರ್ಧಾಕ್ಷಿಣ್ಯವಾಗಿ ತೆರವುಗೊಳಿಸಲು ಮತ್ತು ಅಂತಹ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಲು ಪಾಲಿಕೆ ಆಯುಕ್ತರು ಆದೇಶಿಸಿರುವ ಹಿನ್ನೆಲೆಯಲ್ಲಿ ಮಹದೇವಪುರ ವಲಯ ವ್ಯಾಪ್ತಿಯಲ್ಲಿ ದಿನಾಂಕ: 16.01.2010 ರಿಂದ 15.04.2011ರ ವರೆಗೆ ಕಾರ್ಯಾಚರಣೆ ನಡೆಸಿದ ಸಂದರ್ಭದಲ್ಲಿ ಅನಧಿಕೃತವಾಗಿ ರಸ್ತೆ ಅಗೆತಕ್ಕೆ ಸಂಬಂಧಿಸಿದಂತೆ ಜಪ್ತಿ ಮಾಡಿರುವ ವಾಹನಗಳ ವಿವರ ಹಾಗೂ ವಸೂಲಿ ಮಾಡಿರುವ ದಂಡದ ವಿವರ ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಜಪ್ತಿ ಮಾಡಿದ ದಿನಾಂಕ | ಜಪ್ತಿ ಮಾಡಿದ ವಾಹನ ಸಂಖ್ಯೆ | ವಸೂಲಿ ಮಾಡಿದ ದಂಡದ ಮೊತ್ತ |
|---|---|---|---|
| 1. | 16.01.2010 | ಕೆಎ-03 797 | ರೂ. 1,50,000 |
| 2. | 27.01.2010 | ಕೆಎ-03 ಎಎ-306 | ರೂ. 5,000 |
| 3. | 06.05.2010 | ಟ್ರಾಕ್ಟರ್ ನಂಬರ್ ಪ್ಲೇಟ್ ಇಲ್ಲದ ವಾಹನ | ರೂ. 10,000 |
| 4. | 08.05.2010 | ಕೆಎ-04 9894 ಮತ್ತು ಕೆಎ-03 ಬಿ-9657 | ರೂ. 25,000 |
| 5. | 29.05.2010 | ಕೆಎ-01 ಬಿ-8953 | ರೂ. 1,000 |
| 6. | 01.06.2010 | ಕೆಎ-05 ಡಿ-2506 | ರೂ. 1,000 |
| 7. | 17.07.2010 | ಕೆಎ-53 3607 | ರೂ. 2,620 |
| 8. | 12.08.2010 | ಕೆಎ-02 ಸಿ-3228 | ರೂ. 50,000 |
| 9. | 21.08.2010 | ಕೆಎ-11 ಟಿ-800 | ರೂ. 35,955 |
| 10. | 27.08.2010 | ಕೆಎ-32 ಎ-1344 | ರೂ. 15,000 |
| 11. | 04.09.2010 | ಕೆಎ-03 ಬಿ-400 | ರೂ. 25,000 |
| 12. | 19.10.2010 | ಕೆಎ-02 ಎಎ-4914 | ರೂ. 90,000 |
| 13. | 15.11.2010 | ಕೆಎ-21 7984 ಮತ್ತು ಕೆ-12 2039 | ರೂ. 1,000 |
| 14. | 24.01.2011 | ಕೆಎ-52 ಎಂ-626 ಮತ್ತು ಕೆಎ-07 ಟಿ-951 | ರೂ. 41,418 |
| 15. | 08.02.2011 | ಕೆಎ-04 ಸಿ-8655 | ರೂ. 12,420 |
| 16. | 20.02.2011 | ಕೆಎ-03 ಸಿ-5814 | ರೂ. 30,000 |
| 17. | 22.03.2011 | ಕೆಎ-30 ಎಂ-760 | ರೂ. 1,000 |
| 18. | 15.04.2011 | ಕೆಎ-03 3717 ಮತ್ತು ಕೆಎ-01 ಬಿ-3312 | ರೂ. 4,000 |
| **ಒಟ್ಟು** | | | **ರೂ. 5,00,413** |

ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ರಸ್ತೆ ಅಗೆದು, ಪಾಲಿಕೆಯ ಆಸ್ತಿಗೆ ನಷ್ಟ ಉಂಟು ಮಾಡಿರುವ ವಿವಿಧ ಸಂಸ್ಥೆಗಳಿಂದ ಒಟ್ಟು ರೂ.5,00,413/- (ಐದು ಲಕ್ಷದ ನಾಲ್ಕು ನೂರ ಹದಿಮೂರು) ರೂ.ಗಳ ದಂಡವನ್ನು ವಿಧಿಸಿ, ವಸೂಲು ಮಾಡಲಾಗಿದೆ ಎಂದು ಶ್ರೀ ಕೆ.ಎನ್. ದೇವರಾಜು, ಜಂಟಿ ಆಯುಕ್ತರು (ಮಹದೇವಪುರ) ವಲಯ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***<u>ಪತ್ರಿಕಾ ಪ್ರಕಟಣೆ</u>*** **ದಿನಾಂಕ: 06.06.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಡಿಯೂರು, ವಾರ್ಡ್ ನಂ.167ರಲ್ಲಿ ವನಮಹೋತ್ಸವ ಕಾರ್ಯಕ್ರಮವನ್ನು ದಿನಾಂಕ: 05.06.2011 ರಂದು ಹಮ್ಮಿಕೊಂಡಿದ್ದು, ಗಿಡ / ಸಸಿ ನೆಡುವ ಕಾರ್ಯಕ್ರಮವನ್ನು ಪಾಲಿಕೆ ಸದಸ್ಯರಾದ ಶ್ರೀ ಎನ್.ಆರ್. ರಮೇಶ್ ರವರ ನೇತೃತ್ವದಲ್ಲಿ ಕಾರ್ಯಪಾಲಕ ಅಭಿಯಂತರರು (ಪದ್ಮನಾಭನಗರ), ಸಹಾಯಕ ಕಾರ್ಯಪಾಲಕ ಅಭಿಯಂತರರು (ಬನಶಂಕರಿ) ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ.167 ರವರು ಮತ್ತು ಸಾರ್ವಜನಿಕರು ಭಾಗವಹಿಸಿ, ಸಸಿ ನೆಡುವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿರುತ್ತಾರೆ ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಬನಶಂಕರಿ) ಉಪ ವಿಭಾಗ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**